# ಪರಿಸರ ದಿನಾಚರಣೆ

ಪರಿಸರವೆಂದರೆ ಸುತ್ತ ಮುತ್ತ ಕಾಣುವ ಗಿಡ,ಮರ, ಬಳ್ಳಿ,ಮನುಷ್ಯ, ಪ್ರಾಣಿ,ಪಕ್ಷಿ ಇವುಗಳಷ್ಟೆ ಅಲ್ಲ ಪರಿಸರವೆಂದರೆ ಪ್ರಕೃತಿಯಲ್ಲಿ ಇರುವುದು. ಭೂಮಿ, ಆಕಾಶ, ಅಗ್ನಿ, ಜಲ, ಗಾಳಿ ಎಂಬ ಐದು ಮೂಲ ವಸ್ತುಗಳು, ಇದುವೇ ಪಂಚತ್ವ, ಪಂಚಭೂತ . ಇವುಗಳನ್ನು ಒಳಗೊಂಡು ಪರಿಸರ ಇವುಗಳಲ್ಲಿ ಯಾವ0ದು ಅಂಶವು ಅಸಮತೋಲ ವಾದರೂ ಪರಿಣಾಮ ಪ್ರಕೃತಿಯಲ್ಲಿ ಪರಿಸರದಲ್ಲಿ ಗೋಚರವಾಗುವುದು

ಇಂತಹ ಅಸಮತೋಲನ ಸಹಜವಾದುದಾದರೂ ಪ್ರಕೃತಿ ಅದನ್ನು ತನ್ನಿಂದ ತಾನೇ ಸರಿಪಡಿಸಿಕೊಂಡು ತನ್ನ ಸಹಜ ಸ್ಥಿತಿಯಲ್ಲಿ ಮುಂದುವರೆಯುತ್ತದೆ. ಆದರೆ ತೀರಾ ಸಹಜವಾದ ಅಸಮತೋಲನ ಉಂಟಾದರೆ ಅದರ ಪರಿಣಾಮ ವಿಪರೀತವಾಗಿ ಪ್ರಕೃತಿಯಲ್ಲಿ ಗೋಚರವಾಗಿ ಎಲ್ಲದರ ಮೇಲೂ ಕೆಟ್ಟ ಪರಿಣಾಮ ಬೀರುತ್ತದೆ.

ಈ ರೀತಿ ಪ್ರಕೃತಿಯಲ್ಲಿ ಅಸಮತೋಲನ ಉಂಟಾಗುವುದು ಮಾನವನ ದುರ್ಬುದ್ಧಿಯಿಂದ ಜಗತ್ತನ್ನು ತನ್ನ ಅಧೀನದಲ್ಲಿಟು ಕೊಳ್ಳುತ್ತಾನೆ0ಬ ಅಹಂಭಾವದಲ್ಲಿ ಆತ ಪ್ರಕೃತಿಯ ಅಂಶಗಳ ಮೇಲೆ ಪ್ರಹಾರ ಮಾಡತೊಡಗುತ್ತಾನೆ. ಆತನ ಅತಿಯಾದ ದುರಾಸೆಯಿಂದ ದುರ್ಬಲಗೊಂಡ ಪಂಚತತ್ವಗಳು ಸಮತೋಲನ ಗೊಂಡು ಏರುಪೇರುಗಳು ಉಂಟಾಗುತ್ತವೆ.

ವಾಯುಮಾಲಿನ್ಯ, ಜಲ ಮಾಲಿನ್ಯ, ಆಕಾಶದಲ್ಲಿ ಸಂಘರ್ಷ ಭೂಮಿಯ ಮೇಲೆ ದಬ್ಬಾಳಿಕೆ, ಅಗ್ನಿ ಯೊಡನೆ ಮೂರ್ಖತನದ ಸರಸ ಇವುಗಳೆಲ್ಲವೂ ಮಾನವನಿ0ದಾಗುವ ಅವಘಡಗಳು.

ಇವೆಲ್ಲವುಗಳ ಸದುಪಯೋಗದಿಂದ ತನ್ನ ವಿಕಾಸವನ್ನು ಮಾಡಿಕೊಳ್ಳುವ ಬದಲು ದುರ್ಬಳಕೆ ಮಾಡಿಕೊಂಡು ಪ್ರಕೃತಿ ಪರಿಸರವನ್ನು ನಾಶ ಮಾಡುವುದರ ಜೊತೆಗೆ ಮನುಕುಲವನ್ನು ನಾಶ ಮಾಡಲು ಹೊರಟಿರುವುದು ಪ್ರಕೃತಿಯ ಶಾಪವೇ ಸರಿ.

ಇದರ ಕುರಿತಾಗಿ ಜಾಗೃತಿ ಮೂಡಿಸಲು ಪರಿಸರ ದಿನಾಚರಣೆ ಆಚರಿಸುತ್ತೇವೆ

ಶ್ರೀ ರಾಮಚಂದ್ರ ಮಾರ್ಕಾಂಡೆ